# ಕನ್ನಡ ಸಾಹಿತ್ಯಕ್ಕೆ ತಂತ್ರಜ್ಞಾನ ವಿಸ್ತರಿಸಿರುವ ಸಾಧ್ಯತೆಗಳು: ಒಂದು ಅವಲೋಕನ

**ಎಂ.ಎನ್. ಅರ್ಚನ ತೇಜಸ್ವಿ***

**DOI: https://doi.org/10.5281/zenodo.19415636**

**ABSTRACT**

ವಿಶ್ವದಾದ್ಯಂತ ಇಂದು ಬದಲಾವಣೆಗೆ ಒಳಪಡುತ್ತಿರುವ ಮಾಹಿತಿ ಲೋಕ, ಅಪಾರವಾದ ಪ್ರಗತಿಯತ್ತ ಮುನ್ನುಗ್ಗುತ್ತಿರುವ ತಂತ್ರಜ್ಞಾನ ಎಲ್ಲಾ ಕ್ಷೇತ್ರಗಳನ್ನು ಗಣನೀಯವಾಗಿ ಪ್ರಭಾವಿಸುತ್ತಿದೆ. ಈ ಆಧುನಿಕ ಪ್ರಜ್ಞೆಯಿಂದ ಕನ್ನಡ ಸಾಹಿತ್ಯವೂ ಹಿಂದೆ ಉಳಿಯಲು ಸಾಧ್ಯವಿಲ್ಲ. ಇಂದಿನ ಆಧುನಿಕ ತಂತ್ರಜ್ಞಾನದ ಜಗತ್ತಿನಲ್ಲಿ ಕನ್ನಡ ಸಾಹಿತ್ಯದ ಅಸ್ತಿತ್ವ, ಸ್ಥಾನಮಾನಗಳೇನು ಎಂಬ ವಿವೇಚನೆ ಪ್ರತಿಯೊಬ್ಬ ಕನ್ನಡಿಗನದ್ದೂ ಆಗಬೇಕಿದೆ. ಡಿಜಿಟಲ್ ಯುಗದಲ್ಲಿ 'ಕನ್ನಡ ಸಾಹಿತ್ಯ'ದ ಅಸ್ಮಿತೆ, ಅನನ್ಯತೆಗಳನ್ನು ಕಾಯ್ದುಕೊಳ್ಳುವುದು ನಮ್ಮ ಆದ್ಯ ಕರ್ತವ್ಯವೂ ಹೌದು. ಕನ್ನಡ ಸಾಹಿತ್ಯದಲ್ಲಿ ತಂತ್ರಜ್ಞಾನದ ಬಳಕೆಗೆ ತೊಡಕುಗಳಿರುವಂತೆಯೇ, ವಿಸ್ತರಿಸಲ್ಪಟ್ಟಿರುವ ಅವಕಾಶಗಳನ್ನು ನಾವು ಅಲ್ಲಗಳೆಯುವಂತಿಲ್ಲ. ಡಿಜಿಟಲ್ ಸಹಾಯಕರುಗಳ ಮೂಲಕ ಕನ್ನಡ ಸಾಹಿತ್ಯ, ಕೋಟ್ಯಾಂತರ ಜನರನ್ನು ತಲುಪಲು ಇಂದು ಸಾಧ್ಯವಾಗಿದೆ. ಆಡಿಯೋ ಪುಸ್ತಕ, ಇ-ಪುಸ್ತಕ, ಪಾಡ್‌ಕಾಸ್ಟ್, ಬ್ಲಾಗ್‌ಗಳ ಮೂಲಕ ಕನ್ನಡ ಸಾಹಿತ್ಯ ಪ್ರಸರಣ ಮುಂದುವರೆಯುತ್ತಿದೆ. ಸಾವಿರಾರು ವರ್ಷಗಳಿಂದ ಅನೂಚಾನವಾಗಿ ಬಂದಿರುವ ಕನ್ನಡ ಸಾಹಿತ್ಯ ಮತ್ತು ತಂತ್ರಜ್ಞಾನದ ಸಂಬಂಧ ಯಾವ ಬಗೆಯದ್ದು, ಕನ್ನಡ ಸಾಹಿತ್ಯಕ್ಕೆ ತಂತ್ರಜ್ಞಾನ ಸೃಷ್ಟಿಸಿರುವ ಸಾಧ್ಯತೆಗಳೇನು? ಎಂಬುದನ್ನು ಅರಿಯುವ ಪ್ರಯತ್ನವೇ ಈ ಸಂಶೋಧನಾ ಲೇಖನ.

**KEYWORDS:** ತಂತ್ರಜ್ಞಾನ, ಅಂತರ್ಜಾಲ, ಇ-ಪುಸ್ತಕ, ಜಾಲತಾಣ, ಆನ್‌ಲೈನ್, ತಂತ್ರಾಂಶ, ಆಡಿಯೋ, ವಿಡಿಯೋ, ಕನ್ನಡ ಸಾಹಿತ್ಯ.

* **ಎಂ.ಎನ್. ಅರ್ಚನ ತೇಜಸ್ವಿ,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶೇಷಾದ್ರಿಪುರಂ ಕಾಲೇಜು, ಬೆಂಗಳೂರು.

'ಸಾಹಿತ್ಯ' ಮನುಷ್ಯ ಜೀವನದ ಪ್ರತಿಬಿಂಬ-ಗತಿಬಿಂಬ. ಮಾನವ ಬದುಕಿನ ಹಲವು ಅನುಭವಗಳಿಗೆ ಪ್ರತಿಸ್ಪಂದನೆಯಾಗುವ ಶಕ್ತಿ ಸಾಹಿತ್ಯಕ್ಕಿದೆ. ಕಾಲ-ದೇಶ-ಪರಿಸರಗಳಿಗೆ ಅನುಗುಣವಾಗಿ ರೂಪ ತಳೆಯುವ ಸತ್ವ ಅದರದ್ದು. ಅಂತೆಯೇ ಸಾವಿರಾರು ವರ್ಷಗಳ ಇತಿಹಾಸವಿರುವ ಕನ್ನಡ ಸಾಹಿತ್ಯಕ್ಕೆ ಅಷ್ಟೇ ಸಮೃದ್ಧವೂ, ಸುದೀರ್ಘವೂ ಆದ ಪರಂಪರೆಯಿದೆ. ನಾಡು, ಕಲೆ, ಸಮಾಜ, ಬದುಕು- ಹೀಗೆ ಹಲವು ಜಗತ್ತನ್ನು ಅದು ತನ್ನೊಳಗೆ ಅಡಕಗೊಳಿಸಿಕೊಂಡು, ಕಾಲಕ್ಕೆ ತಕ್ಕಂತೆ ತನ್ಮೂಲಕ ಅನಾವರಣಗೊಳಿಸುತ್ತಾ ಬಂದಿದೆ. ಅಷ್ಟೇ ಅಲ್ಲದೇ ಸಾರ್ವಕಾಲಿಕವೂ, ಶ್ರೇಷ್ಠವೂ ಆದ ಮೌಲ್ಯಗಳಿಗೆ ಕನ್ನಡ ಸಾಹಿತ್ಯ ಒತ್ತು ನೀಡುತ್ತಾ ಬಂದಿರುವುದನ್ನೂ ನಾವು ಮರೆಯುವಂತಿಲ್ಲ. ಶಾಸನಗಳಿಂದ ಆರಂಭವಾಗಿ ಪಂಪ-ರನ್ನ, ಕುಮಾರವ್ಯಾಸರನ್ನು ಒಳಗೊಳ್ಳುತ್ತಾ ನವ್ಯ – ನವ್ಯೋತ್ತರಗಳವರೆಗೂ ತನ್ನದೇ ಆದ ವಿಶಿಷ್ಟ ಪರಂಪರೆಯನ್ನು ನಿರ್ಮಿಸಿಕೊಂಡಿದೆ. ಕನ್ನಡ ಸಾಹಿತ್ಯ ಹಲವು ಸ್ಥಿತ್ಯಂತರಗಳನ್ನು ಕಾಣುತ್ತಾ ತನ್ನ ಅಸ್ತಿತ್ವವನ್ನು ಸ್ಥಾಪಿಸುತ್ತಾ ಬಂದಿದೆ. ನಾನಾ ಅವಸ್ಥಾಭೇಧಗಳನ್ನು ಅದು ಕಂಡರೂ ನಮ್ಮ ಬದುಕಿನೊಂದಿಗೆ ನಿತ್ಯ ಪ್ರವಹಿಸುವ ಜೀವ ವಾಹಿನಿಯಾಗಿರುವುದು ಸುಳ್ಳಲ್ಲ. ಆ ಮೂಲಕ ಅದು ಮಾನವನ ಸಾಮಾಜಿಕ ಜೀವನಕ್ಕೆ ಭದ್ರ ಬುನಾದಿಯನ್ನು ಹಾಕಿಕೊಟ್ಟಿದೆ. ಧರ್ಮ, ಕಾವ್ಯಧರ್ಮ, ನಾಡು-ನುಡಿ ಪ್ರೇಮ, ಪ್ರಕೃತಿ, ಜೀವನಪ್ರೀತಿ ಹೀಗೆ ಕನ್ನಡ ಸಾಹಿತ್ಯದ ವಸ್ತು ವಿಷಯ ವೈವಿಧ್ಯಮಯವಾಗಿದೆ.

ಈ ಹಿಂದೆ ಓಲೆಗರಿ, ಕಲ್ಲು, ತಾಳೆಗರಿ, ತಾಮ್ರಪಟಗಳ ಮೇಲಿದ್ದ ಸಾಹಿತ್ಯ ಕಾಗದದ ಮೇಲೆ ಮುದ್ರಣವಾಗುವುದರ ಮೂಲಕ ಹೊಸ ಕ್ರಾಂತಿಯನ್ನೇ ಸೃಷ್ಟಿಸಿತು. 19ನೇ ಶತಮಾನದ ಮೊದಲ ಭಾಗದಲ್ಲಿ ಮುದ್ರಣ ಯಂತ್ರದ ಸಹಾಯದಿಂದ ಕನ್ನಡದ ಮೊದಲ ಪುಸ್ತಕವನ್ನು ಮುದ್ರಿಸಲಾಯಿತು. ಅನಂತರ ಕನ್ನಡದ ಬರವಣಿಗೆಯ ಸ್ವರೂಪವೇ ಬದಲಾದದ್ದು ನಿಜ. ಮುಂದೆ ಕಾಗದದ ಮುದ್ರಣದಿಂದ ತಂತ್ರಜ್ಞಾನದವರೆಗೆ ಕನ್ನಡ ಭಾಷೆ-ಸಾಹಿತ್ಯದಲ್ಲಿ ಸಾಕಷ್ಟು ಬದಲಾವಣೆಗಳು ಸಂಭವಿಸಿವೆ. ಮಾಹಿತಿ ತಂತ್ರಜ್ಞಾನ ಎಲ್ಲಾ ಗಡಿ-ರೇಖೆಗಳನ್ನು ಅಳಿಸಿ ಹಾಕಿವೆ. ಈ ಹಿಂದೆ ಬಳಸಲಾದ ಎಲ್ಲಾ ರೀತಿಯ ತಂತ್ರಗಳನ್ನೂ ಮೀರಿದ ಉನ್ನತ ಬಗೆಯ ತಂತ್ರಜ್ಞಾನ ಎನಿಸಿಕೊಂಡಿದೆ. ನಾಗರಿಕ ಜೀವನದ ದೈನಂದಿನ ಉದ್ದೇಶಗಳನ್ನು ಪೂರೈಸುವ ಹಲವು ಸೌಲಭ್ಯಗಳಲ್ಲಿ ತಂತ್ರಜ್ಞಾನವೂ ಒಂದಾಗಿದೆ. ಅದೇ ರೀತಿ ಈ ತಂತ್ರಜ್ಞಾನದ ಪ್ರಭಾವ ಜನಜೀವನದ ಎಲ್ಲಾ ಕ್ಷೇತ್ರಗಳಲ್ಲೂ ದಟ್ಟವಾಗಿ ಮೂಡುತ್ತಿದೆ. ಈ ಯುಗ – ತಂತ್ರಜ್ಞಾನದ ಯುಗ, ಡಿಜಿಟಲ್ ಯುಗ. ಜಾಲತಾಣಗಳು, ಬ್ಲಾಗ್‌ಗಳು, ಫೇಸ್‌ಬುಕ್, ಇ-ಮೇಲ್‌ಗಳು ಇಂದು ಹಾಸುಹೊಕ್ಕಾಗಿವೆ. ಪ್ರತಿಯೊಂದು ಹಂತದಲ್ಲೂ ಈ ತಂತ್ರಜ್ಞಾನದ ಫಲಿತಗಳನ್ನು ನಾವು ಒಂದಲ್ಲಾ ಒಂದು ರೀತಿಯಲ್ಲಿ ಪಡೆಯುತ್ತಲೇ ಇದ್ದೇವೆ. ವೇಗವಾಗಿ ಬೆಳೆಯುತ್ತಿರುವ, ಕ್ಷಣಾರ್ಧದಲ್ಲೇ ಬದಲಾಗುತ್ತಿರುವ ತಂತ್ರಜ್ಞಾನ – ಮಾಹಿತಿ ತಂತ್ರಜ್ಞಾನ ನಮ್ಮ ಭಾಷೆ ಹಾಗೂ ಸಾಹಿತ್ಯವನ್ನು ಪ್ರಭಾವಿಸದಿರುವುದು ಸಾಧ್ಯವಿಲ್ಲ. ಈ ಪ್ರಭಾವ ಒಳಿತು-ಕೆಡಕು ಎರಡಕ್ಕೂ ಕಾರಣವಾಗಿವೆ. ಮುಂಬರುವ

ದಿನಗಳಲ್ಲಿ ತಂತ್ರಜ್ಞಾನ ಮಾನವ ಜೀವನವನ್ನು ಇನ್ನೆಷ್ಟರ ಮಟ್ಟಿಗೆ ಆವರಿಸುವುದೋ ಹೇಳುವುದು ಕಷ್ಟ.

ಇಂದಿನ ಆಧುನಿಕ ವಿಜ್ಞಾನ – ತಂತ್ರಜ್ಞಾನದ ಯುಗದಲ್ಲಿ, ಕಳೆದು ಹೋಗುತ್ತಿರುವ ನೈತಿಕ ಮೌಲ್ಯಗಳ ಪುನರುಜ್ಜೀವನ, ಸಾಹಿತ್ಯ–ಸಂಸ್ಕೃತಿಗಳ ಮಂಥನಗಳು ಈಗ ಅಗತ್ಯವಾಗಿ ಆಗಬೇಕಿರುವ ಕಾರ್ಯ. ಬದಲಾದ ಕಾಲಮಾನದ ಅಗತ್ಯಕ್ಕೆ ತಕ್ಕಂತೆ ಕನ್ನಡ ಸಾಹಿತ್ಯವೂ ತನ್ನ ಹೊಸ ಹಾದಿಯನ್ನು ಕಂಡುಕೊಂಡಿದೆಯೇ? ತನ್ನ ಸ್ವರೂಪವನ್ನು ಬದಲಾಯಿಸಿಕೊಂಡಿದೆಯೇ ಎಂಬುದು ಚಿಂತನಾರ್ಹ.

ಕನ್ನಡ ಸಾಹಿತ್ಯ ಮತ್ತು ತಂತ್ರಜ್ಞಾನ ಎಂಬ ಎರಡೂ ಪರಿಕಲ್ಪನೆಗಳನ್ನು ಒಟ್ಟಿಗಿಟ್ಟಾಗ, ಅವೆರಡೂ ಪರಸ್ಪರ ಪೂರಕವೇ ಎಂಬ ಪ್ರಶ್ನೆ ಮೂಡುವುದು ಸಹಜ. ಏಕೆಂದರೆ ಹಿಂದಿನ ಕಾಲಮಾನದ ಓದುಗನಿಗೂ, ಇಂದಿನ ಓದುಗನಿಗೂ ಸಾಕಷ್ಟು ವ್ಯತ್ಯಾಸಗಳಿವೆ. ಓದುಗನ ಸಾಹಿತ್ಯಾಸಕ್ತಿ, ಹಂಬಲ, ಅಭಿರುಚಿಗಳು ಬದಲಾಗಿವೆ. ಕನ್ನಡ ಸಾಹಿತ್ಯಾಸ್ವಾದನೆ ಅಂದಿನಷ್ಟು ಇಂದು ವ್ಯಾಪಕವಾಗಿಲ್ಲ. ಹೀಗಿದ್ದಾಗಲೂ ಇಂದು ಹೊಸ ಬಗೆಯ ಓದುಗರು, ಹೊಸ ರೀತಿಯ ಬರಹಗಾರರು ಹುಟ್ಟುತ್ತಿದ್ದಾರೆ. ಡಿಜಿಟಲ್ ವೇದಿಕೆಯ ಮೂಲಕ ಬರಹಗಾರರು ಭಿನ್ನವಲಯದ ಓದುಗರನ್ನು ತಲುಪುತ್ತಿದ್ದಾರೆ. ಕತೆ, ಕಾವ್ಯ, ಕಾದಂಬರಿ, ಲೇಖನಗಳು ಇಂದು ಕಂಪ್ಯೂಟರ್ ಪರದೆಯ ಮೂಲಕ ಓದುಗರನ್ನು ತನ್ನೆಡೆಗೆ ಕೈ ಬೀಸಿ ಕರೆಯುತ್ತಿದೆ. ಈ ಮೊದಲು ಆಲೋಚನೆ–ಭಾವನೆಗಳು, ಕಾಗದದ ಮೇಲೆ 'ಅಕ್ಷರ' ರೂಪವನ್ನು ಪಡೆದು, ಪುಸ್ತಕವಾಗಿ ತಲುಪುತ್ತಿತ್ತು. ಇಂದು ಕಂಪ್ಯೂಟರ್ ಮುಖಾಂತರ ನೇರವಾಗಿ ಟೈಪ್ ಮಾಡಿ, ಪುಸ್ತಕಗಳನ್ನೂ ಅತ್ಯಂತ ಕಡಿಮೆ ಸಮಯದಲ್ಲಿ ಪ್ರಕಟಿಸಬಹುದಾಗಿದೆ. ಇದರಿಂದ ಪ್ರಕಟಣೆಗೆ ಹಿಡಿಸುವ ಸಮಯವನ್ನೂ ಉಳಿಸಬಹುದು.

**ಡಿಜಿಟಲ್ ಹಾದಿಯಲ್ಲಿ ಕನ್ನಡದ ಹೆಜ್ಜೆ:**

ಅಂತರ್ಜಾಲದ ವ್ಯಾಪ್ತಿ ಹೆಚ್ಚಿದಂತೆ ಕನ್ನಡ ಸಾಹಿತ್ಯವೂ ಈ ನಿಟ್ಟಿನಲ್ಲಿ ಹೆಜ್ಜೆ ಹಾಕುತ್ತಿದೆಯೇ? ಹೊಸ ತಲೆಮಾರಿನ ಓದುಗ, ಸಂಶೋಧಕ, ವಿಮರ್ಶಕರ ನಡುವೆ ಕನ್ನಡ ಸಾಹಿತ್ಯದ ಪ್ರಕಾರ, ಓದು, ಅಧ್ಯಯನ–ವಿಮರ್ಶೆ ಹೇಗೆ? ಎಂಬ ಪ್ರಶ್ನೆಗಳಿಗೆ ತಂತ್ರಜ್ಞಾನದ ಮೂಲಕವೇ ಉತ್ತರ ಕಂಡುಕೊಳ್ಳುವುದು ಸಾಧ್ಯ.

ಹಿಂದೆ ದೂರದರ್ಶನ, ಆಕಾಶವಾಣಿಗಳ ಮೂಲಕ ಪ್ರಸರಣವಾಗುತ್ತಿದ್ದ ಸಾಹಿತ್ಯ ಇಂದಿನ ಡಿಜಿಟಲ್ ಯುಗದಲ್ಲಿ ತನ್ನ ರೆಕ್ಕೆ ಬಿಚ್ಚಿ ವಿಸ್ತರಿಸಿದೆ. ಮುದ್ರಣ ಮಾಧ್ಯಮದ ಮೂಲಕವೇ ಜನರನ್ನು ತಲುಪುತ್ತಿದ್ದ ಸಾಹಿತ್ಯ ಇಂದು ಹಲವು ಜಾಲತಾಣಗಳು, ಬ್ಲಾಗ್‌ಗಳು, ಆನ್‌ಲೈನ್ ಪೋಸ್ಟ್‌ಗಳ ಮೂಲಕ ನಾನಾರೂಪಗಳಲ್ಲಿ ತಲುಪುತ್ತಿದೆ. ಇದಕ್ಕೆ ಜೊತೆಯಾಗಿ ಹಲವು ಕನ್ನಡ ತಂತ್ರಾಂಶಗಳು–ಕೆ.ಪಿ.ರಾವ್ ಅವರ 'ಸೇಡಿಯಾಪು' ತಂತ್ರಾಂಶ, ನಂತರ ಕರ್ನಾಟಕ ಸರ್ಕಾರ ಅಧಿಕೃತವಾಗಿ ಘೋಷಿಸಿದ 'ನುಡಿ', 80 ರ ದಶಕದಲ್ಲಿ ಖಾಸಗಿ ಕಂಪನಿಗಳಿಂದ ತಯಾರಿಸಲ್ಪಟ್ಟಿದ್ದ

ಶ್ರೀಲಿಪಿ, ಆಕೃತಿ, ಶಬ್ದರತ್ನ, ಕಸ್ತೂರಿ ರಂಗಾಚಾರ್ ಅವರ 'ಕಸ್ತೂರಿ' ತಂತ್ರಾಂಶಗಳು ತಂತ್ರಜ್ಞಾನದ ದಾರಿಯಲ್ಲಿ ಸಾಗಲು ಕನ್ನಡಕ್ಕೆ ನೆರವಾದವು.

ಹಳೆಗನ್ನಡ ಕಾವ್ಯಗಳು, ಪ್ರಾಚೀನ ಕೃತಿಗಳನ್ನು ಸಂರಕ್ಷಿಸುವ ಅಂಕೀಕರಣದ ಕಾರ್ಯ ಶ್ಲಾಘನೀಯವಾದುದು. ಅಂದರೆ ತಂತ್ರಜ್ಞಾನದ ಮೂಲಕ ಕೃತಿಗಳನ್ನು ಡಿಜಿಟಲ್ ರೂಪಕ್ಕೆ ಪರಿವರ್ತಿಸಿ ಆನ್‌ಲೈನ್‌ನಲ್ಲಿ ಓದಲು ಲಭ್ಯವಾಗುವಂತೆ ಮಾಡುವುದು. ಅಂದರೆ ಸ್ಕ್ಯಾನ್ ಮಾಡುವ ಅಥವಾ ಟೈಪ್ ಮಾಡುವ ಮೂಲಕ ಪಿಡಿಎಫ್ ಮಾಡಿ ಓದುಗರಿಗೆ ಸುಲಭವಾಗುವಂತೆ ಮಾಡುವುದು. The Internet Archive ಈ ರೀತಿಯ ಡಿಜಿಟಲ್ ರೂಪದ ಕೃತಿ ಸಂಗ್ರಹಕ್ಕೆ ಉತ್ತಮ ವೇದಿಕೆಯಾಗಿದೆ. ಸಮಗ್ರದಾಸ ಸಾಹಿತ್ಯ, ಭರತೇಶ ವೈಭವ ಸಂಗ್ರಹ ಮೊದಲಾದವುಗಳಲ್ಲದೆ, ಜಾನಪದ ಅಧ್ಯಯನಕ್ಕೆ ಸಂಬಂಧಿಸಿದ ಹಲವು ಕೃತಿಗಳು, ಹಲವು ಸಂಪಾದಿತ ಕೃತಿಗಳು ಡಿಜಿಟಲ್ ರೂಪದಲ್ಲಿ ಮತ್ತು ಆಡಿಯೋ ರೂಪದಲ್ಲಿ ಇಲ್ಲಿ ಲಭ್ಯವಿದೆ. AI ಧ್ವನಿಯಲ್ಲಿ ಹಲವು ಕನ್ನಡ ಕತೆಗಳನ್ನು ಇಲ್ಲಿ ಕೇಳಬಹುದು. ಇದಲ್ಲದೇ 'ಶಿವಮೊಗ್ಗ ಡಿಜಿಟಲ್ ಲೈಬ್ರರಿ' ಸಂಚಯ, ಋತುಮಾನ, ಭಾರತ ಸರ್ಕಾರದ 'ಭಾರತವಾಣಿ ಜಾಲತಾಣ' , ವಿಕಿಸೋರ್ಸ್ ಮುಕ್ತ ಗ್ರಂಥಾಲಯ, ಸುರಹೊನ್ನೆ ಜಾಲತಾಣಗಳು ಕನ್ನಡ ಸಾಹಿತ್ಯದ ಹಲವು ಕೃತಿಗಳನ್ನು ಡಿಜಿಟಲ್ ರೂಪದಲ್ಲಿ ಸೆರೆಹಿಡಿಯಲು ಶ್ರಮಿಸುತ್ತಿವೆ. ಇಲ್ಲಿನ ಕೆಲವು ಜಾಲತಾಣಗಳಲ್ಲಿ ಡಿಜಿಟಲ್ ಪುಸ್ತಕಗಳಷ್ಟೇ ಅಲ್ಲದೆ ಕನ್ನಡ ಸಾಹಿತ್ಯ ಸಂಬಂಧಿತ ಲೇಖನಗಳನ್ನು, ವಿಮರ್ಶೆಗಳನ್ನು ಓದಬಹುದಾಗಿದೆ. ಶಿವಮೊಗ್ಗ ಡಿಜಿಟಲ್ ಲೈಬ್ರರಿ ಜಾಲತಾಣವಂತೂ ಭೌತಿಕವಾಗಿ ಒಂದು ಪುಸ್ತಕ ಓದುವಾಗ, ಪುಟ ತಿರುವಿದಾಗ ದೊರೆಯುವ ಮೃದು ಅನುಭವವನ್ನೇ ನೀಡುವುದು ವಿಶಿಷ್ಟ ಸಂಗತಿಯಾಗಿದೆ.

Servants of Knowledge ಎಂಬ ಜಾಲತಾಣದಲ್ಲೂ ಕನ್ನಡ ಸಾಹಿತ್ಯ ಸಂಬಂಧಿತ ಚಟುವಟಿಕೆಗಳನ್ನು ನಾವು ನೋಡಬಹುದು. ಗಿರೀಶ್ ಕಾರ್ನಾಡ್‌ರ ಧ್ವನಿ ಮಾಲಿಕೆಗಳು, ವಚನಗಳು, ಕುಮಾರವ್ಯಾಸನ ಕಾವ್ಯ ವಾಚನ–ಚರ್ಚೆ, ಜಾನಪದ – ತಾಳ ಮದ್ದಲೆಗಳ ಆಡಿಯೋಗಳು ಮುಕ್ತವಾಗಿ ಕೇಳಲು ಸಿಗುತ್ತವೆ. ಇವೆಲ್ಲವೂ ಇಂಗ್ಲಿಷ್ ಭಾಷೆಯಲ್ಲಿವೆ.

Digital Library of India ದಲ್ಲಿ ಸುಮಾರು 3,345 ಕನ್ನಡ ಪುಸ್ತಕಗಳು ಲಭ್ಯವಿದ್ದು, ಕನ್ನಡ ಸಾಹಿತ್ಯದ ಪುಸ್ತಕಗಳನ್ನು ಓದುವವರಿಗೆ, ವಿಮರ್ಶೆ – ಸಂಶೋಧನಾ ಕಾರ್ಯ ನಡೆಸುವವರಿಗೆ ಸಹಾಯಕವಾಗಿದೆ.

ಕರ್ನಾಟಕ ಸರ್ಕಾರದ ಒಡೆತನದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಹಯೋಗದೊಂದಿಗೆ 2009ರಲ್ಲಿ ಆರಂಭವಾದ ಅಂತರ್ಜಾಲದ ಕನ್ನಡ ಜ್ಞಾನಕೋಶ 'ಕಣಜ'. ಕನ್ನಡ ಆನ್‌ಲೈನ್ ವಿಶ್ವಕೋಶ ಎಂದು ಕರೆಸಿಕೊಳ್ಳುತ್ತಿದ್ದ ಇದು 2023ರಲ್ಲಿ ಮುಚ್ಚುವ ಹಂತಕ್ಕೆ ಬಂದಿದ್ದು ಸದ್ಯಕ್ಕೆ ಈ ಜಾಲತಾಣವನ್ನು ತೆರೆಯಲು ಸಾಧ್ಯವಾಗದಿರುವುದು ವಿಪರ್ಯಾಸ. ಇದಲ್ಲದೆ,

ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಇಲಾಖೆಯಿಂದ ಅಭಿವೃದ್ಧಿ ಪಡಿಸಲಾದ ಉಚಿತ ಆಂಡ್ರಾಯ್ಡ್ ಅಪ್ಲಿಕೇಶನ್ – ಇ–ಸಾರ್ವಜನಿಕ ಗ್ರಂಥಾಲಯ. ಇಲ್ಲಿ ಕನ್ನಡದ ಇ–ಪುಸ್ತಕಗಳು, ವಿಡಿಯೋಗಳು ಸೇರಿದಂತೆ ವಿವಿಧ ಭಾಗಗಳಿದ್ದು, ಈ ಅಪ್ಲಿಕೇಶನ್ ಮೂಲಕ ಡಿಜಿಟಲ್ ಪುಸ್ತಕಗಳ ಓದು ಮಾತ್ರವಲ್ಲದೇ, ಹಲವು ವಿಷಯಗಳ ವೀಡಿಯೋಗಳ ವೀಕ್ಷಣೆ, ಸಂವಾದಾತ್ಮಕ ಪ್ರಯೋಗಗಳಿಗೂ ಅವಕಾಶವಿರುವುದು ವಿಶೇಷ.

'ಸಂಚಿ ಫೌಂಡೇಶನ್' ಹಲವು ಕಲಾಪ್ರಕಾರಗಳನ್ನು ಡಿಜಿಟಲ್ ರೂಪದಲ್ಲಿ ಸಂರಕ್ಷಿಸುವ, ಮುಂದಿನ ಪೀಳಿಗೆಗೆ ತಲುಪಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿವೆ. ಕುವೆಂಪು ಅವರ ರಕ್ತಾಕ್ಷಿ, ಯಶವಂತ ಚಿತ್ತಾಲರ ಕಥೆಯಾದಳು ಹುಡುಗಿ, ಲಂಕೇಶರ ಗುಣಮುಖ –ಇವುಗಳ ದೃಶ್ಯರೂಪಕಗಳು ಸಿಗುತ್ತವೆ. ಆಡಿಯೋ–ವಿಷುಯಲ್ ಸಾಕ್ಷ್ಯಚಿತ್ರಗಳ ಮೂಲಕ ಕನ್ನಡ ಸಾಹಿತ್ಯ ಕೃತಿಗಳು ವಿಭಿನ್ನ ರೀತಿಯಲ್ಲಿ ಜನರನ್ನು ತಲುಪುತ್ತಿರುವುದು ಸಂತಸದ ಸಂಗತಿ.

2007ರಲ್ಲಿ ಪ್ರಾರಂಭವಾದ SCRIBD– ಡಿಜಿಟಲ್ ದಾಖಲೆಗಳ ಗ್ರಂಥಾಲಯ ಇವರಲ್ಲಿ ಕನ್ನಡ ಸಾಹಿತ್ಯದ ಕೆಲವು ಪುಸ್ತಕಗಳು ಇ– ಪುಸ್ತಕಗಳ ರೂಪದಲ್ಲಿವೆ. PDF ರೂಪದಲ್ಲಿ ಇವು ಓದುವುದಕ್ಕೆ ದೊರೆಯುತ್ತವೆ.

ಇಂದಿನ ತಂತ್ರಜ್ಞಾನದ ಯುಗ ಕನ್ನಡ ಸಾಹಿತ್ಯಕ್ಕೆ ತೆರೆದಿರುವ ಇನ್ನಿತರ ಆಯ್ಕೆಗಳನ್ನು ಪರಿಶೀಲಿಸುವುದಾದರೆ – Telecast ಮತ್ತು Ear Pods ಎಂಬ ಎರಡು ಪರಿಕಲ್ಪನೆಗಳ ಸಂಯುಕ್ತ ರೂಪ 'Podcasts' ಗಳು. ಇವು ಡಿಜಿಟಲ್ ರೂಪದ ಆಡಿಯೋ ಸರಣಿಗಳು. ಇವರಲ್ಲಿ ಕೆಲವು ಉಚಿತವಾಗಿಯೂ ಇನ್ನೂ ಕೆಲವು Sub–scribe ಅಥವಾ Download ಮೂಲಕ ದೊರೆಯುತ್ತವೆ. ವಿಶೇಷವಾಗಿ ಕನ್ನಡ ಸಾಹಿತ್ಯವನ್ನು ಕುರಿತ Podcast ಗಳು ಯೂಟ್ಯೂಬ್, Instagram ಗಳಲ್ಲಿ ದೊರೆಯುವುದಲ್ಲದೆ ಹೆಚ್ಚಿನವು Spotify ನಲ್ಲಿ ಕಾರ್ಯನಿರ್ವಹಿಸುತ್ತವೆ, 'ಬಾಲ್ ಗಾಥಾ ಕನ್ನಡ' Podcast ನಲ್ಲಿ ಕೆಲವು ಜನಪದ ಕತೆಗಳ ಆಡಿಯೋ ಇದ್ದು, ಕತೆಗಳನ್ನು ಗ್ರಂಥಸ್ಥ ಭಾಷೆಯಲ್ಲಿ ನಿರೂಪಣೆ ಮಾಡಲಾಗಿದೆ. ಕತೆಗೆ ತಕ್ಕಂತೆ ಹಿನ್ನೆಲೆಯ ಸ್ಥಿರ ಚಿತ್ರಣಗಳು ಆಸಕ್ತಿ ಮೂಡಿಸುತ್ತವೆ.

Stories From India Spotify, Folktales by Story – ಈ ಜಾಲತಾಣಗಳಲ್ಲಿ ಕನ್ನಡ ಜನಪದ ಕತೆಗಳನ್ನು ಇಂಗ್ಲಿಷ್ ಭಾಷೆಯ ಮೂಲಕ ಹೇಳಲಾಗಿರುವುದು ವಿಶೇಷ. ಆದರೆ ಆ ಮೂಲಕ ನಮ್ಮ ಕನ್ನಡ ಜನಪದ ಕತೆಗಳು ಕನ್ನಡಿಗರಲ್ಲದವರನ್ನು ತಲುಪುತ್ತದೆಂಬುದು ಶ್ಲಾಘನೀಯ. ಹಾ! ಸವಿಗನ್ನಡ Podcast ಸಹ ಕನ್ನಡದ ಹಲವು ಕಾವ್ಯ, ನಾಟಕ, ಕತೆಗಳ ತಿರುಳನ್ನು ಆಸಕ್ತರಿಗೆ ಉಣಬಡಿಸುತ್ತಿವೆ. ಕನ್ನಡ ಸಾಹಿತ್ಯದ ಓದು, ವಿವರಣೆಗಳಿಗೆ Podcast ಗಳು ಶಕ್ತಿಯುತ ಮಾಧ್ಯಮವಾಗಿದೆ. ಓದುವ ಅಗತ್ಯವಿಲ್ಲದೆಯೇ ಕೇಳುಗರಿಗೆ ಕನ್ನಡ ಸಾಹಿತ್ಯದ ಸಮಕಾಲೀನ ಸಂಪರ್ಕಕ್ಕೆ ಅನುವು ಮಾಡಿಕೊಡುತ್ತದೆ. ಪುಸ್ತಕ ವಿಮರ್ಶೆ, ಅಭಿಪ್ರಾಯ ಹಂಚಿಕೆ, ಸಾಹಿತ್ಯ

ವಿಚಾರ ಚರ್ಚೆ ಇವೆಲ್ಲವುಗಳಿಗೆ ಇಲ್ಲಿ ಅವಕಾಶವಿದೆ. ತಂತ್ರಜ್ಞಾನ ಯುಗ, ಸಾಹಿತ್ಯದ ಓದುಗ, ಬರಹಗಾರನಿಗೆ ತಮ್ಮ ಸಾಹಿತ್ಯ ಕೃಷಿಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಹಲವು ದಾರಿಗಳನ್ನು ತೆರೆದಿಟ್ಟಿವೆ. ವಿವಿಧ ಜಾಲತಾಣಗಳು, ಬ್ಲಾಗ್‌ಗಳಲ್ಲಿ ಬರೆಯುವ ಆಸಕ್ತಿ ಇರುವ ಯಾರಾದರೂ ತಮ್ಮ ಕಥೆ, ಕವನ, ಚುಟುಕಗಳನ್ನು ಮುಕ್ತವಾಗಿ ಹಂಚಿಕೊಳ್ಳಬಹುದು. ಪುಸ್ತಕ ಮುದ್ರಣದ ಗೋಜಿಲ್ಲದೆ ಸಾವಿರಾರು ಜನರಿಗೆ ಇವನ್ನು ಏಕಕಾಲದಲ್ಲಿ ಕಡಿಮೆ ಸಮಯದಲ್ಲಿ ದಾಟಿಸಬಹುದು. ತ್ವರಿತ ಅಭಿಪ್ರಾಯ ಹಂಚಿಕೆ, ತಕ್ಷಣದ ಪ್ರತಿಕ್ರಿಯೆಗಳು ಇಲ್ಲಿನ ಮತ್ತೊಂದು ಅನುಕೂಲ. ಕೇಳು ಪುಸ್ತಕಗಳು (Au–dio Books), ಇ–ಪುಸ್ತಕಗಳು–ಇ–ಜ್ಞಾನದ ಮೂಲಕ ಕನ್ನಡ ಸಾಹಿತ್ಯ ಅಭಿರುಚಿಯನ್ನು ಹೆಚ್ಚಿಸುವಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿವೆ. ಹೊಸ ಬಗೆಯ ಕನ್ನಡ ಸಾಹಿತ್ಯಾಭಿಮಾನಿಗಳನ್ನು ಸೃಷ್ಟಿಸುತ್ತಿವೆ. ಕತೆ–ಕಾವ್ಯಗಳಿಗೆ ಬೇಕಾದ ಚಿತ್ರಗಳು, ವಿಡಿಯೋ ಅನಿಮೇಷನ್‌ಗಳನ್ನು ಬಳಸಿ ಅವುಗಳನ್ನು ಇನ್ನಷ್ಟು ಆಸಕ್ತಿಕರವನ್ನಾಗಿಸಬಹುದು. 'ಪ್ರಥಮ್ ಬುಕ್ಸ್' ಎನ್ನುವ ಸ್ವಯಂ ಸೇವಾ ಸಂಸ್ಥೆ ಮಕ್ಕಳ ಕತೆಗಳಿಗೆ ಸ್ಥಿರ ಚಿತ್ರಣಗಳನ್ನು ಬಳಸಿ, ಅವುಗಳನ್ನು ಚಲಿಸುವಂತೆಯೂ ಮಾಡಿ, ದನಿ ಹೊರಡಿಸುವ ತಂತ್ರ ಬಳಸಿರುವುದನ್ನೂ ಇಲ್ಲಿ ಹೆಸರಿಸಬಹುದು.

ಇನ್ನು ಕರೋನಾದ ಪರಿಣಾಮವಾಗಿ ಒದಗಿ ಬಂದ 'ವೆಬಿನಾರ್‌ಗಳು' ಕನ್ನಡ ಸಾಹಿತ್ಯದ ಒಲವಿರುವ ಸಮಾನ ಮನಸ್ಕರು ಒಂದೆಡೆ ಸೇರಿ, ತಾವಿದ್ದ ಜಾಗದಿಂದಲೇ ತಮ್ಮ ಸಾಹಿತ್ಯದ ಚಟುವಟಿಕೆಗಳನ್ನು ಕೈಗೊಳ್ಳಲು ಸಾಧ್ಯವಾಗಿವೆ. ಆನ್‌ಲೈನ್ ಕನ್ನಡ ಸಾಹಿತ್ಯ ವೇದಿಕೆಗಳಾದ ಕಹಳೆ, ಕ್ಯೂರಾ (Quora), ಪುಸ್ತಕದಂಗಡಿ, ಕೆಂಡಸಂಪಿಗೆ – ಇವೆಲ್ಲಾ ಕನ್ನಡ ಸಾಹಿತ್ಯದ ಆನ್‌ಲೈನ್ ಓದು, ಬರವಣಿಗೆ, ವಿಮರ್ಶೆಗೆ ಪ್ರಮುಖ ವೇದಿಕೆಗಳಾಗಿವೆ. ಕನ್ನಡದ ಹೆಚ್ಚು ಬರಹಗಾರ ಸಮುದಾಯವನ್ನು ಸೃಷ್ಟಿಸುವ ಸಾಹಿತ್ಯ ಕಾರ್ಯಾಗಾರಗಳನ್ನು ನಡೆಸುವ ಮೂಲಕ ಇವು ಕನ್ನಡದ ಹಳೆಯ ಮತ್ತು ಹೊಸ ಬರಹಗಾರರಿಗೆ ಸಾಹಿತ್ಯ ಸೇತುವೆಗಳಾಗಿವೆ.

ಇದಲ್ಲದೆ ಕನ್ನಡದಲ್ಲಿ ತಾಂತ್ರಿಕ ಮಾಹಿತಿಯನ್ನು ಒದಗಿಸುವ ಟಿ.ಜಿ.ಶ್ರೀನಿಧಿ ಅವರ ಇ–ಜ್ಞಾನ ಜಾಲತಾಣ ಹಾಗೂ ಅದರ ಅಂಕಣ ಬರಹಗಳು, ಮೇಘನಾ ಸುಧೀಂದ್ರ ಅವರ AI ಕತೆಗಳೂ, ಹೊಸ ರೂಪದ ಕನ್ನಡ ಸಾಹಿತ್ಯ ಸೃಷ್ಟಿಗೆ, ವಿಜ್ಞಾನ–ತಂತ್ರಜ್ಞಾನ ಕುರಿತ ಮಾಹಿತಿಯನ್ನು ಕನ್ನಡದಲ್ಲೇ ತಿಳಿಯುವ ಬಗೆಗೆ ಹೊಸ ಪ್ರಯತ್ನಗಳಾಗಿವೆ. ಕನ್ನಡ ಗಣಕ ಪರಿಷತ್ತು ಅಭಿವೃದ್ಧಿ ಪಡಿಸಿದ ವಿಶಿಷ್ಟ ತಂತ್ರಾಂಶ 'ಕಗಪ–ವಾಗಕ್ಷರ', ಇದು ಯುನಿಕೋಡ್ ಕನ್ನಡ ಗಣಕ ಅಕ್ಷರಗಳನ್ನು ಬರೆದುಕೊಂಡು ಧ್ವನಿಯನ್ನು ಪಠ್ಯವಾಗಿ ಬದಲಾಯಿಸುತ್ತದೆ. ಶಿಷ್ಟ ಕನ್ನಡ ಮಾತ್ರವಲ್ಲದೆ ಪ್ರಾದೇಶಿಕ ಆಡುಮಾತಿನ ಶೈಲಿಗಳನ್ನು ಇದು ಗುರುತಿಸುತ್ತದೆ.

'ಅಕ್ಷರಜಾಣ' ತಂತ್ರಾಂಶ. ಕೈ ಬರಹದ ಕನ್ನಡ ಅಕ್ಷರಗಳನ್ನು ಡಿಜಿಟಲ್ ಪಠ್ಯವಾಗಿ ಪರಿವರ್ತಿಸುತ್ತದೆ. ವಿಶೇಷವಾಗಿ ಹಸ್ತ ಪ್ರತಿಗಳನ್ನು ಡಿಜಿಟಲ್ ರೂಪಕ್ಕೆ ಪರಿವರ್ತಿಸಲು ಇದು ಸಹಾಯಕವಾಗಿದೆ. ಚಿತ್ರಾಕ್ಷರ, ಇ–ಅಕ್ಷರಾಯಣ್

ತಂತ್ರಾಂಶಗಳೂ ಪರಿಣಾಮಕಾರಿ OCR ತಂತ್ರಾಂಶಗಳಾಗಿವೆ.

ಅವಧಿ, ಬುಕ್‌ಬ್ರಹ್ಮ, ವಿಕಿಪೀಡಿಯಾ – ಇವು ಕನ್ನಡ ಪುಸ್ತಕಗಳ ಸಂಕ್ಷಿಪ್ತ ಮಾಹಿತಿ ಒದಗಿಸುತ್ತದೆ. ಪುಸ್ತಕ ಕೊಂಡು ಓದುವ ಮೊದಲು ಅದರ ಬಗೆಗಿನ ಆರಂಭಿಕ ವಿವರ ಓದುಗನಿಗೆ ಸಹಾಯಕವಾಗುತ್ತದೆ.

ಹೀಗೆ ಹೇಳುತ್ತಾ ಹೋದಂತೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಇತ್ತೀಚಿನ ವರ್ಷಗಳಲ್ಲಿ 'ಕನ್ನಡ ಸಾಹಿತ್ಯ'ದಲ್ಲಿ ತಂತ್ರಜ್ಞಾನ ಬಳಕೆಯ ಪ್ರಯತ್ನಗಳು ಸಾಕಷ್ಟು ಕಂಡು ಬಂದಿವೆ. ಕನ್ನಡ ಸಾಹಿತ್ಯದಲ್ಲಿ ಹೊಸ ಬಗೆಯನ್ನು ಸೃಷ್ಟಿಸುವಲ್ಲಿ 'ಕನ್ನಡ ಬ್ಲಾಗ್‌ಗಳೂ' ಸಕ್ರಿಯವಾಗಿವೆ. ಇದೊಂದು ರೀತಿಯ ಅಂತರ್ಜಾಲ ದಿನಚರಿ. ಕಾವ್ಯ, ಕತೆ, ಪ್ರವಾಸ ಕಥನ, ನಾಟಕ ಹೀಗೆ ಹಲವು ವಿಧಗಳ ಬ್ಲಾಗ್‌ಗಳು ಕನ್ನಡಿಗರನ್ನು ಆನ್‌ಲೈನ್‌ನಲ್ಲಿ ಒಗ್ಗೂಡಿಸುತ್ತಿವೆ. ಹಳೆಗನ್ನಡ ಕಾವ್ಯ ಸಂಗ್ರಹ, ಹೊನಲು, ಕನ್ನಡ ದೀವಿಗೆ, ದಟ್ಸ್ ಕನ್ನಡ, ಸಂಗಾತಿ, ಚುರುಮುರಿ ಮೊದಲಾದ ಕನ್ನಡ ಬ್ಲಾಗ್‌ಗಳು ಡಿಜಿಟಲ್ ಜಗತ್ತಿನಲ್ಲಿ ಸದ್ದುಮಾಡುತ್ತಿವೆ.

ಕನ್ನಡ ಪುಸ್ತಕಗಳ ಬಗೆಗೆ ಮಾಹಿತಿ, ಹಳಗನ್ನಡ ಕಾವ್ಯಗಳ ಸಂಗ್ರಹ, ಕನ್ನಡ ಸಾಹಿತ್ಯದ ಓದು, ವಿಮರ್ಶೆ, ಚರ್ಚೆ, ಪ್ರತಿಕ್ರಿಯೆಗಳೆಲ್ಲವೂ ಇಂದಿನ ಡಿಜಿಟಲ್ ಯುಗದಲ್ಲಿ ಸುಲಭ ಸಾಧ್ಯವಾಗಿದೆ. ಬಹುತೇಕ ಉಚಿತವಾಗಿ, ಅತ್ಯಂತ ಕಡಿಮೆ ಸಮಯದಲ್ಲಿ ನಾವು ಕುಳಿತ ಜಾಗದಲ್ಲಿಯೇ ನಮ್ಮ ಬೆರಳಂಚಿಗೆ ನಿಲುಕುತ್ತಿವೆ. ತಂತ್ರಜ್ಞಾನ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ಈಗಾಗಲೇ ಸಂಚಲನ ಸೃಷ್ಟಿಸಿವೆ. ಇಂದಿನ ಯುವಪೀಳಿಗೆಯಂತೂ ChatGPT, Gemini AI ಮೇಲೆ ಹೆಚ್ಚಾಗಿ ಅವಲಂಬಿತವಾಗಿರುವುದು ಸುಳ್ಳಲ್ಲ. ಕ್ರಮೇಣವಾಗಿ ಇದು AI ಜಗತ್ತಾಗಿ ಬದಲಾಗುತ್ತಿರುವುದು ನಿಜವಾದರೂ, ಕನ್ನಡ ಸಾಹಿತ್ಯ, ಭಾಷೆ, ವ್ಯಾಕರಣ, ಸೂಕ್ಷ್ಮತೆ, ಆಳ, ಸಾಂಸ್ಕೃತಿಕ ಅನನ್ಯತೆ, ಉಚ್ಚಾರಾಂಶ ವೈವಿಧ್ಯವನ್ನು AI ಅರ್ಥ ಮಾಡಿಕೊಳ್ಳಲು ಇನ್ನೂ ಸಾಕಷ್ಟು ಸಮಯ ಬೇಕಾಗಬಹುದೇನೋ.

ಒಟ್ಟಿನಲ್ಲಿ ಕನ್ನಡದ ಹಲವು ಜಾಲತಾಣಗಳು, ಇ–ಪುಸ್ತಕಗಳು, ಆಡಿಯೋ ಬುಕ್‌ಗಳು, ವೀಡಿಯೋ, ಪಾಡ್‌ಕಾಸ್ಟ್, ಬ್ಲಾಗುಗಳು, ಆನ್‌ಲೈನ್ ಅಂಕಣಗಳು– ಮಾಹಿತಿ ತಂತ್ರಜ್ಞಾನ ದಾರಿಯಲ್ಲಿ ಕನ್ನಡ ಸಾಹಿತ್ಯ ಪ್ರಗತಿಯ ಫಲಶ್ರುತಿಗಳು. ಈ ಹಾದಿಯಲ್ಲಿ ಸಾಕಷ್ಟು ಸವಾಲುಗಳೂ ಇಲ್ಲದಿಲ್ಲ. ಇಲ್ಲಿ ಸೃಜನಶೀಲತೆ ಕುಗ್ಗುವ ಅಪಾಯವಿದೆ. ದೇಸಿ ಸೊಗಡಿಗೆ ಧಕ್ಕೆಯೊದಗುವ ಆತಂಕವಿದೆ. ಹಾಗಿದ್ದಾಗಲೂ ಕಾಲ ಬದಲಾದಂತೆ ಅದರೊಂದಿಗೆ ಹೆಜ್ಜೆ ಹಾಕಬೇಕಾದುದು ಅನಿವಾರ್ಯ. ತಂತ್ರಜ್ಞಾನದ ಬೆಳಕಿನಲ್ಲಿ ಕನ್ನಡ ಸಾಹಿತ್ಯದ ಅನನ್ಯತೆಯನ್ನು ಉಳಿಸಿಕೊಳ್ಳುವ ಜವಾಬ್ದಾರಿ ಸಂಪೂರ್ಣ ನಮ್ಮದು.

## ಪರಾಮರ್ಶನ ಗ್ರಂಥಗಳು:


1. ಸಾಂಬಮೂರ್ತಿ (ಸಂ), (2009), ಭಾಷಾ ತಂತ್ರಜ್ಞಾನ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
2. ಚಂದ್ರಶೇಖರ ಕಂಬಾರ, (2004), ದೇಶೀಯ ಚಿಂತನ, ಬೆಂಗಳೂರು: ಅಂಕಿತ ಪುಸ್ತಕ.
3. ಶ್ರೀನಿಧಿ ಟಿ.ಜಿ., (2007), ಇ–ಜ್ಞಾನ (e–Jnana), ಬೆಂಗಳೂರು: www.ejnana.com.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.